ಪ್ರೀತಿಯಿಂದ ಮಾತಾಡಿಸಿ ವಾತಾವರಣ ತಿಳಿಯಾಗಿಸಲು ಯತ್ನಿಸಿದರೂ ವಿಜ್ಜು ದಿನದಿಂದ ದಿನಕ್ಕೆ ಹೆಚ್ಚು ಒರಟಾಗಿ ವರ್ತಿಸುತ್ತಿದ್ದ. ಆ ದಿನ ಪಲ್ಲವಿ ಮರೆಯಲೂ ಅಸಾಧ್ಯ. ಬೇಗಬೇಗನೆ ಅಡುಗೆ ಮನೆ ಕೆಲಸ ಮುಗಿಸಿ ವಿಜ್ಜು ತೋಳಿಗೆ ಸೇರಿಕೊಳ್ಳಬೇಕೆಂದು ಬಂದಾಗ ತೀರಾ ಒರಟಾಗಿ ತಳ್ಳಿ, 'ಜಸ್ಟ್ ಗೆಟ್ ಲಾಸ್ಟ್' ಎಂದ ರೀತಿಗೆ ಅವಮಾನವಾಗಿತ್ತು. ಆದರೂ ತೋರಗೊಡದೆ 'ಯಾಕ್ ವಿಜ್ಜು, ನಾನು ಬೇಡ್ವಾ' ಎಂದದ್ದಕ್ಕೆ, 'ಹೆಂಡ್ತಿ ಹೆಂಡ್ತಿ ಥರಾನೇ ಇರಬೇಕು, ಗೆಸ್ಟ್ ಆಗಬಾರದು' ಎಂದು ಕುಹಕವಾಗಿ ನಕ್ಕಿದ್ದ. 'ಅಂದ್ರೆ...', 'ನಿನ್ನ ಅಂದ್ರೆಗಳಿಗೆಲ್ಲ ಉತ್ತರ ಕೊಟ್ಟುಕೊಂಡು ಕೂರಲು ಆಗಲ್ಲ. ಜಸ್ಟ್ ಲೀವ್ ಮಿ ಅಲೋನ್.' ಕುಗ್ಗಿ ಹೋದಳು. ಎಷ್ಟು ತಿರಸ್ಕಾರ ಆ ಕಣ್ಣುಗಳಲ್ಲಿ. ಅವತ್ತೇ ಬೇರೆ ಮಲಗಲು ಆರಂಭಿಸಿದ್ದು. ಒಂದು ವಾರವಾದರೂ ರಮಿಸಲೂ ಬಾರದಿರುವುದನ್ನು ನೋಡಿ ಗಂಟೆಗಟ್ಟಲೆ ಅತ್ತಿದ್ದಳು. ಮರುದಿನ ತನ್ನ ಸಹೋದ್ಯೋಗಿ ಸುಂದರ್ ಲಂಚ್ ಟೈಮಿನಲ್ಲಿ, 'ಮೇಡಂ, ನಿನ್ನೆ ರಾತ್ರಿ ಹೋಟೆಲಿಗೆ ನಾವು ಫ್ಯಾಮಿಲಿ ಎಲ್ಲ ಊಟಕ್ಕೆ ಹೋಗಿದ್ವಿ, ನಿಮ್ಮ ವಿಜ್ಜು ಸಿಕ್ಕಿದ್ರು. ಯಾರೋ ಅವ್ರ ಫೀಮೇಲ್ ಕೊಲಿಗ್‌ನಾ ಪರಿಚಯ ಮಾಡಿಕೊಟ್ರು' ಎಂದು ಸಹಜವಾಗಿ ಹೇಳಿದರೂ ಪಲ್ಲವಿಗೆ ಮುಜುಗರವಾಯಿತು. ಹಿಂದಿನ ರಾತ್ರಿ ಊಟ ಬೇಡವೆಂದೂ, ರಾತ್ರಿ ಗೆಳೆಯ ವಿಕ್ಕಿ ಜೊತೆಗೆ ಊಟ ಮಾಡಿ ಬರುವುದಾಗಿಯೂ ಹೇಳಿದ್ದ ವಿಜ್ಜು. ಹಾಗಾದರೆ ನನಗೆ ಸುಳ್ಳು ಹೇಳಿದನೇ? ಛೇ! ಏನಾಗುತ್ತಿದೆ? ಎಷ್ಟು ಹೊಂದಾಣಿಕೆ ಮಾಡಿಕೊಂಡರೂ ಸಾಕಾಗುತ್ತಿಲ್ಲವಲ್ಲ. ಯಾಕೆ? ಇವನಿಗೆ ಸಂಸಾರ ಅಥವಾ ನಾನು ಬೇಡವೇ? ಏನಾಗ್ತಿದೆ ಅದನ್ನಾದರೂ ಕೇಳಬೇಕು ಎಂದುಕೊಂಡರೂ, ಕೇಳಿದರೂ ಉತ್ತರ ಸಿಗುವ ಯಾವುದೇ ಲಕ್ಷಣಗಳು ದೂರದೂರಕ್ಕೂ ಇಲ್ಲದೇ ಇರುವ ಸಾಧ್ಯತೆಗಳೇ ಹೆಚ್ಚಿರುವಾಗ ಮೌನವನ್ನು ತಬ್ಬಿಕೊಂಡಳು. ಮಗಳ ಮುಖ ನೆನಪಾಗಿ ಬಾಯಿ ಮುಚ್ಚಿ ದಿನ ತೆಗೆಯುವ ಅನಿವಾರ್ಯತೆ ಕಂಡುಕೊಂಡಳು.

ಫೇಸ್‌ಬುಕ್ಕಿನಲ್ಲಿ ಕಾಲೇಜು ಗೆಳತಿ ಅನಿತಾ ಲೋಬೊ ಮತ್ತೆ ಸಿಕ್ಕಿದ್ದು ಪಲ್ಲವಿಗೆ ಖುಷಿ ಕೊಟ್ಟಿತ್ತು. ನವೋದಯ ಶಾಲೆಯಲ್ಲಿ ಓದುತ್ತಿದ್ದಾಗ ಅನಿತಾಳೊಂದಿಗಿನ ಸ್ನೇಹ ಮರೆಯಲು ಸಾಧ್ಯವೇ! ತಾನು ಗೋವಾದಲ್ಲಿ ಇರುವುದಾಗಿಯೂ, ಸರ್ವೀಸ್ ಅಪಾರ್ಟ್‌ಮೆಂಟೊಂದನ್ನು ನಡೆಸುತ್ತಿರುವುದಾಗಿ ಹೇಳಿದ್ದಳು. 'ವಿದೇಶಿಯರು ಬಂದು ದಿನಗಟ್ಟಲೆ ಗೋವಾದ ಸಮುದ್ರತೀರದ ಮರಳಿನ ಮೇಲೆ ಬಿದ್ದುಕೊಂಡು ಬದುಕಿನ ಏಕತಾನತೆಯನ್ನು ಕಳೆಯುತ್ತಾರೆ. ಇತ್ತ ನನ್ನ ವ್ಯವಹಾರವೂ ಯಶಸ್ವಿಯಾಗಿ ನಡೆಯುತ್ತಿದೆ' ಎಂದಾಗ ನಕ್ಕಿದ್ದಳು. 'ನೀನೂ ಫ್ಯಾಮಿಲಿ ಜೊತೆ ಒಮ್ಮೆ ಬಾ' ಎಂದಾಗ, 'ಪವಿತ್ರಳ ರಜಾ ಶುರುವಾಗಲಿ, ಖಂಡಿತಾ ಪ್ಲಾನ್ ಮಾಡ್ತಿನಿ' ಎಂದಿದ್ದಳು. ಕೆಲಸ, ಮಗಳ ಸ್ಕೂಲು ಇದರ ನಡುವೆ ಗಂಡನ ಬೇಕಾಬಿಟ್ಟಿ ವರ್ತನೆಯೂ ಪಲ್ಲವಿಯನ್ನು ಮಾನಸಿಕವಾಗಿ ಸೋಲಿಸಿತ್ತು. ಎಷ್ಟು ಕಷ್ಟ, ಜೊತೆಗಿರುವವರು ಮನಸ್ಸು ಅರ್ಥ ಮಾಡಿಕೊಳ್ಳದೆ ಇರುವಾಗ ದಿನಗಳನ್ನು ತಳ್ಳೋದು? ಈ ರೀತಿ ಅಸಡ್ಡೆ ತೋರುವಾಗ ಎಷ್ಟು ಸಂಯಮ ತೋರಬಹುದು. ಮಾತಿಗೂ ಅವಕಾಶವಿಲ್ಲದಂತೆ ಎದ್ದು ಹೋಗುವಾಗ ಎಷ್ಟು ಅಂತ ಮಾತಿಗೆ ಪ್ರಯತ್ನಿಸಬಹುದು. ಪಲ್ಲವಿ, ಒಳಗಿಂದ ಕುಸಿಯುತ್ತಿದ್ದಳು. ಪ್ರಪಂಚಕ್ಕೆ ಎಲ್ಲವೂ ಚೆನ್ನಾಗಿದೆಯೆನ್ನುವಂತೆ ಕಂಡರೂ ಯಾವುದೂ ಸರಿಯಿಲ್ಲದಿರುವ ಕೊರಗಿನಿಂದ ವಿಚಲಿತಳಾಗುತ್ತಿದ್ದಳು. ಮತ್ತೆ ಮತ್ತೆ ಮನಕ್ಕೆ ನೋವಾದಾಗ ನಾಲ್ಕು ದಿನ ಎಲ್ಲಾದರೂ ದೂರ ಹೋಗಿ ಬಿಡಬೇಕೆಂದು ಅನಿಸುತ್ತಿತ್ತಾದರೂ ಪವಿತ್ರಳ ಮುಖ ನೆನಪಾದೊಡನೇ ಸುಮ್ಮನಾಗುತ್ತಿತ್ತು ಮನಸ್ಸು. ಇದನ್ನು ತನ್ನದೇ ಆದ ರೀತಿಯಲ್ಲಿ ಹ್ಯಾಂಡಲ್ ಮಾಡಲೇಬೇಕು ಎಂದು ಅರಿವಾದಾಗ ವಿಜ್ಜು ಬಳಿ ಹೇಳಿದ್ದಳು, 'ನನಗೆ ಸ್ವಲ್ಪ ದಿನಗಳ ಬ್ರೇಕ್ ಬೇಕು ಎಲ್ಲದರಿಂದ, ಎಲ್ಲರಿಂದನೂ.' ಕ್ಷಣದಲ್ಲಿ, 'ಶ್ಯೂರ್, ವೈ ನಾಟ್. ಪವಿತ್ರಳ ಜವಾಬ್ದಾರಿ ನಂದು, ಡೊಂಟ್ ವರಿ, ನಿನ್ನಿಷ್ಟದ ಜಾಗಕ್ಕೆ ಹೋಗಿ ಬಾ' ಎಂದು ಹೇಳಿದಾಗ ಅಚ್ಚರಿಯಾದರೂ ತೋರಗೊಡದೆ ಬ್ಯಾಂಕಿಗೆ ಹೊರಟಳು. ಮಧ್ಯಾಹ್ನ, ಊಟದ